| | |
|---|---|
| ಪ್ರಾಸಾ | 09 |
| ಚಾಸಾ | 02 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 48/2023**

**ದಿನಾಂಕ: 18.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಪದ್ಮ |
| ಗಂಡನ ಹೆಸರು | : | ಮಲ್ಲಿಕಾರ್ಜುನ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಗೌರಿಬಿದನೂರು, ಮಾದವನಗರ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಪ್ರಾಸಾ-7-ಚಂದ್ರಕಲಾ ನನ್ನ ಅಕ್ಕ, ಚಾಸಾ-3 ಮುದುಕೃಷ್ಣ ನನ್ನ ಅಣ್ಣ, ಪ್ರಾಸಾ-1-ಅನಿತ ನನ್ನ ತಂಗಿ, ಪ್ರಾಸಾ-2 ಶ್ರೀನಿವಾಸ್ ನನ್ನ ಅಣ್ಣ, ಪ್ರಾಸಾ-5, ಪ್ರಾಸಾ-8, ಪ್ರಾಸಾ-6 ನಮ್ಮ ಗ್ರಾಮಸ್ಥರು. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. 1 ಮತ್ತು 3 ನೇ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇಲ್ಲ, ಅವರು ಮೃತಪಟ್ಟಿರುತ್ತಾರೆ.

| | |
|---|---|
| ಪ್ರಾಸಾ | 09 |
| ಚಾಸಾ | 02 |

2. ದಿಃ 04.09.2023 ರಂದು ಬೆಃ 11.00 ರಿಂದ 12.00 ಗಂಟೆವರೆಗೆ ಗಲಾಟೆಯಾಗಿರುತ್ತದೆ. ಆರೋಪಿತರು ತುಂಬಾ ಕೆಟ್ಟ ಮಾತು ಮತ್ತು ಒಲಸು ಭಾಷೆಯಿಂದ ನನಗೆ ಮತ್ತು ನಮ್ಮ ಅಕ್ಕ ಚಂದ್ರಕಲಾರವರಿಗೆ ಬೈದಿರುತ್ತಾರೆ. ನಮ್ಮ ಜಮೀನಿನ ಬಳಿ ಸರ್ವೆ ನಂಃ 17/3 ರಲ್ಲಿ ಬೈದಿರುತ್ತಾರೆ. ನಾವು ಕಾಪೋಳ್ಳು ನಮ್ಮ ಜೊತೆ ಏನು ನಡೆಯುವುದಿಲ್ಲ, ನೀವು ಕೀಳು ಜಾತಿಯವರು, ಸಣ್ಣ ಜಾತಿಯವರು, ನಿಮ್ಮದೆಲ್ಲಾ ಸಣ್ಣ ಬುದ್ದಿ, ನೀವು ಏನು ಮಾಡಿಕೊಳ್ಳುತ್ತೀರೊ ಮಾಡಿಕೊಳ್ಳಿ ಎಂದು ಹೇಳಿದರು. ನಮ್ಮನ್ನು ಹೊಡೆಯಲು ಕೋಲನ್ನು ತೆಗದುಕೊಂಡು ಬಂದಿದ್ದರು. ನಾನು ಚಂದ್ರಕಲಾರವರನ್ನು ಹಿಂದೆಕ್ಕೆ ಎಳೆದುಕೊಂಡು ಹೋಗಿರುತ್ತೇನೆ. ಸದರಿ ಸಮಯ ಗ್ರಾಮಸ್ಥರಿದ್ದರು, ಅವರ ಹೆಸರು ಈಗ ಹೇಳಲು ಬರುವುದಿಲ್ಲ. ನೀವು ಈ ಕಡೆ ಬಂದರೆ ಸಾಯಿಸಿ ಹಾಕುತ್ತೇವೆ ಎಂದು ಬೆದರಿಕೆ ಹಾಕಿದ್ದರು. ಕುರಿಗಳನ್ನು ಮೇಯಿಸಲು ಬಿಟ್ಟು ಬೆಳೆ ನಾಶ ಮಾಡಿರುತ್ತಾರೆ, ತೊಗರಿಕಾಳು, ರಾಗಿ, ಕಡಲೆ ಬೆಳೆಯುತ್ತೇವೆ. ಮೊದಲಿಗೆ ನಾವು ಪೆರೇಸಂದ್ರ ಪೊಲೀಸ್ ಠಾಣೆಗೆ ಅದೇ ದಿನ ದೂರು ನೀಡಿದ್ದೇವು, ಆದರೆ ಅವರು ಸರಿಯಾಗಿ ರೆಸ್ ಪಾನ್ಸ್ ಮಾಡಲಿಲ್ಲ. ನಂತರ ನಾವು ಚಿಕ್ಕಬಳ್ಳಾಪುರದ ಎಸ್.ಪಿ. ಕಚೇರಿಗೆ ದೂರನ್ನು ನೀಡಿರುತ್ತೇವೆ. 4-5 ಬಾರಿ ಸರ್ವೆ ಮಾಡಿಸಿರುತ್ತೇವೆ. ಈ ಗಲಾಟೆ

| | |
|---|---|
| ಪ್ರಾಸಾ | 09 |
| ಚಾಸಾ | 02 |

ನಡೆಯುವ ಪೂರ್ವದಲ್ಲಿ ಯಾವುದೇ ಗಲಾಟೆ ನಡೆದಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಅಕ್ಕಪಕ್ಕದ ಜಮೀನಿನವರಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ .ಬಿ.ಎಂ.ಎಸ್. ವಕೀಲರಿಂದಃ**

ನಾನು ಮಾದವನಗರ, ಗೌರಿಬಿದನೂರಿನಲ್ಲಿ ಖಾಯಂ ವಾಸಿಯಾಗಿರುತ್ತೇನೆ. ನಮ್ಮ ತವರು ಮನೆ ವರ್ಲಕೊಂಡ ಆಗಿರುತ್ತದೆ. ನಾನು ಮೊದಲಿಗೆ ಟೀಚರ್ ಕೆಲಸ ಮಾಡುತ್ತಿದ್ದೆ, ಈಗ ಮಾಡುವುದಿಲ್ಲ. ನಾನು ಟೀಚರ್ ಕೆಲಸ 4 ವರ್ಷಗಳ ಹಿಂದೆ ಮಾಡುತ್ತಿದ್ದೆ. ದಿಃ 04.09.2023 ರಂದು ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾವು ಯಾರು ಜಮೀನಿನ ಬಳಿ ಹೋಗಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದ ದಿನ ದೂರನ್ನು ನೀಡಿರುತ್ತೇವೆ. ಗಲಾಟೆ ನಡೆಯಿತು ಎಂದು ಹೇಳಲಾದ ಸಂದರ್ಭದಲ್ಲಿ ಲಕ್ಷ್ಮಿನಾರಾಯಣಪ್ಪ, ಪ್ರಭಾಕರ, ಗಾಯಿತ್ರಿ, ವೆಂಕಟಲಕ್ಷ್ಮಮ್ಮ, ಮುನಿರಾಜು, ಚೌಡಪ್ಪ, ಸುಹಾಸ್ ಮತ್ತು ಗ್ರಾಮಸ್ಥರು ಇದ್ದರು. ನಮಗೆ ಜಮೀನು ಮೂರು ಎಕರೆ 20 ಗುಂಟೆ ಇರುತ್ತದೆ. ಪೂರ್ವಕ್ಕೆಃ ಗ್ರಾಮಠಾಣ, ಪಶ್ಚಿಮಕ್ಕೆಃ ಎನ್ ?ಹೆಚ್. 7 ರಸ್ತೆ, ಉತ್ತರಕ್ಕೆಃ ಊರಿಗೆ ಹೋಗುವ ರಸ್ತೆ, ದಕ್ಷಿಣಕ್ಕೆಃ ಕಾಚಪ್ಪರವರ

| | |
|---|---|
| ಪ್ರಾಸಾ | 09 |
| ಚಾಸಾ | 02 |

ಜಮೀನು ಮೊದಲಿಗೆ ಅದು ವೆಂಕಟರವಣಪ್ಪರವರ ಜಮೀನಿನಾಗಿರುತ್ತದೆ, ಅದನ್ನು ಈಗ ಮಾರಿರುತ್ತಾರೆ. ನಮ್ಮ ಜಮೀನಿನ ಪಕ್ಕ ಸರ್ವೆ ನಂ: 26/7 ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಹೊಂದಿಕೊಂಡಂತೆ ಸರ್ವೆ ನಂ: 26/7 ರಲ್ಲಿ 5 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ 5 ಗುಂಟೆ ಜಮೀನಿನಲ್ಲಿ ಆರೋಪಿತರು ಮನೆ ಮತ್ತು ಕುರಿಶೆಡ್ಡನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ 15-20 ವರ್ಷಗಳಿಂದ ಆರೋಪಿತರು ಮನೆ ಮತ್ತು ಕುರಿ ಶೆಡ್ಡನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮನೆ ಮತ್ತು ಕುರಿಶೆಡ್ಡು ವಿಚಾರದಲ್ಲಿ ನಾನು ಮತ್ತು ನನ್ನ ತಾಯಿಯವರು ಗುಡಿಬಂಡೆ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಯು ನನ್ನ ತಾಯಿ ಇದ್ದಾಗ ದಾಖಲಿಸಿದ್ದೇವು ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ರತ್ನಮ್ಮ. ಕ್ರಿಮಿನಲ್ ಪ್ರಕರಣ ದಾಖಲಿಸಿದಾಗ ನನ್ನ ತಾಯಿಯ ಹೆಸರನ್ನು ಗೌರಮ್ಮ ಎಂದು ಹೇಳಿದ್ದೇವು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ " ನಮ್ಮ ಜಮೀನಿನ ಕೊನೆಯ ಭಾಗದಲ್ಲಿ ಮುದ್ದರೆಡ್ಡಿ ಹಳ್ಳಿ ಗ್ರಾಮದ ಒಕ್ಕಲಿಗರ ಜನಾಂಗದ ಲಕ್ಷ್ಮಿನಾರಾಯಣಪ್ಪ ಬಿನ್ ವೆಂಕಟರಾಯಪ್ಪ, ಅವರ ತಮ್ಮ ಪ್ರಭಾಕರ, ಲಕ್ಷ್ಮಿನಾರಾಯಣಪ್ಪನ ಹೆಂಡತಿ ವೆಂಕಟಲಕ್ಷ್ಮಮ್ಮ, ಪ್ರಭಾಕರ್ ರವರ ಹೆಂಡತಿ ಮಂಜುಳ ಹಾಗೂ ಮಗ ಮುನಿರಾಜ,

| | |
|---|---|
| ಪ್ರಾಸಾ | 09 |
| ಚಾಸಾ | 02 |

ಸೊಸೆ ಗಾಯಿತ್ರಿರವರುಗಳು ನಮ್ಮ ಭೂಹಿಡುವಳಿ ಜಮೀನಿನಲ್ಲಿ ಅಕ್ರಮವಾಗಿ ಜಮೀನು ಒತ್ತುವರಿ ಮಾಡಿಕೊಂಡು ದೌರ್ಜನ್ಯದಿಂದ ನಮ್ಮ ಜಾಗದಲ್ಲಿ ಕುರಿ ಶೆಡ್ಡನ್ನು ನಿರ್ಮಾಣ ಮಾಡಿಕೊಂಡಿದ್ದು" ಎಂದು ಹೇಳಿಕೆ ನೀಡಿರುವುದಿಲ್ಲ ಎಂದು ನಿರಾಕರಿಸಿದ್ದು, ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಆರೋಪಿತರು ಯಾವುದೇ ಒತ್ತುವರಿ ಮಾಡಿಕೊಂಡಿಲ್ಲ, ಅವರು ಸರ್ವೆ ನಂ: 26/7 ರಲ್ಲಿ 5 ಗುಂಟೆ ಜಮೀನಿನಲ್ಲಿ ಮನೆ ಮತ್ತು ಕುರಿಶೆಡ್ಡನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ಎಲ್ಲಿ ಬರುತ್ತದೊ ನನಗೆ ಗೊತ್ತಿಲ್ಲ ಎಂದು ಹೇಳಿ ಸಾಕ್ಷಿ ಮುಂದುವರೆದು ಗ್ರಾಮಠಾಣದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರು ನನ್ನ ಮೇಲೆ ಹಾಗೂ ನನ್ನ ಅಕ್ಕನ ಮೇಲೆ ಹೊಡೆಯಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನಗೆ ಯಾವುದೇ ರೀತಿಯ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಸಿವಿಲ್ ಪ್ರಕರಣ ಇರುವುದರಿಂದ ಅದನ್ನು ಇತ್ಯಾರ್ಥ ಪಡಿಸಿಕೊಳ್ಳಲ್ಲು ಈ ಸುಳ್ಳು ಪ್ರಕರಣವನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಕ್ಕ ನೀಡಿರುವ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 09 |
| ಚಾಸಾ | 02 |

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 18.03.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**